ಬೈಲಹೊಂಗಲ ಕೆ. ಎಸ್. ಆರ್. ಟಿ. ಸಿ ಡಿಪೋದಿಂದ ಹೊಸ ಬಸ್ಸುಗಳ ಪ್ರಾರಂಭ

೯೬೬(೧೬೦೯) ಶ್ರೀ ಎಸ್. ಹೆಚ್. ಕೌಜಲಗಿ. (ಬೈಲಹೊಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೈಲಹೊಂಗಲ ಕೆ. ಎಸ್. ಆರ್. ಟಿ. ಸಿ. ಡಿಪೋದಿಂದ ಈ ವರ್ಷ ಎಷ್ಟು ಹೊಸ ರೂಟ ಗಳನ್ನು ಪ್ರಾರಂಭಿಸಲಾಗಿದೆ ?

ಆ) ಬೈಲಹೊಂಗಲ ಡಿಪೋದಿಂದ ಹೆಚ್ಚಿನ ರೂಟ್ ಪ್ರಾರಂಭಿಸಬೇಕೆಂದು ಜನರ ಬೇಡಿಕೆ ಇದ್ದರೂ ಇದುವರೆಗೆ ಪ್ರಾರಂಭಿಸದಿರಲು ಕಾರಣವೇನು ?

ಇ) ಬೈಲಹೊಂಗಲ ಕೆ. ಎಸ್. ಆರ್. ಟಿ. ಸಿ. ಡಿಪೋ ಲಾಭದಲ್ಲಿ ಇದೆಯೇ ಅಥವಾ ನಷ್ಟದಲ್ಲಿ ಗದೆಯೇ (೧೯೯೦ರ ಮಾಹಿತಿ ಕೊಡಿರಿ)

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಜನವರಿ ೧೯೯೦ ರಿಂದೀಚೆಗೆ ೪ ಹೊಸ ಮಾರ್ಗಗಳನ್ನು ಪ್ರಾರಂಭಿಸಲಾಗಿದೆ.

ಆ) ಸಾರಿಗೆ ಅಗತ್ಯದ ಆಧಾರದ ಮೇಲೆ ಹೊಸ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ.

ಇ) ಬೈಲಹೊಂಗಲ ಡಿಪೋವು ೧೯೯೦ನೇ ಜನವರಿ ಯಿಂದ ಜೂನ್‌ವರೆಗಿನಿರುವ ಲಾಭ.—ನಷ್ಟದ ವಿವರ ಈ ಕೆಳಕಂಡಂತಿದೆ. (ಲಕ್ಷ ರೂಗಳಲ್ಲಿ) (-ಲಾಭ) (+ನಷ್ಟ)

ಜನವರಿ	—	—೩.೧೨
ಫೆಬ್ರುವರಿ	—	—೨.೪೪
ಮಾರ್ಚ್	—	—೧.೩೩
ಏಪ್ರಿಲ್	—	+೦.೩೫
ಮೇ	—	+೯.೨೨
ಜೂನ್	—	+೨.೫೦

ಬೆಳಗಾವಿ ಜಿಲ್ಲೆಗೆ ೧೯೯೦ನೇ ಇಸವಿಯಲ್ಲಿ ಒದಗಿಸಲಾದ ಬಸ್ಸುಗಳು

೯೬೭(೧೬೧೦) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಈ ವರ್ಷ ಬೆಳಗಾವಿ ಜಿಲ್ಲೆಗೆ (ವಿಭಾಕ್ಕೆ) ಎಷ್ಟು ಹೊಸಬಸ್ಸುಗಳನ್ನು ಪೂರೈಸಲಾಗಿದೆ ?

ಆ) ಪ್ರತಿಯೊಂದು ಡಿಪೋಗೆ ಎಷ್ಟು ಹೊಸ ಬಸ್ಸುಗಳನ್ನು ಕೊಡಲಾಗಿದೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಬೆಳಗಾವಿ ವಿಭಾಗಕ್ಕೆ ೧-೧-೯೦ ರಿಂದ ೩೦-೬-೯೦ರವರೆಗೆ ೪೫ ಹೊಸ ಬಸ್ಸುಗಳನ್ನು ಪೂರೈಸಲಾಗಿದೆ.

ಆ) ಡಿಪೋಗಳ ಕಾರ್ಯ ಯೋಜನೆಯ ಆಧಾರದಲ್ಲಿ ವಾಹನಗಳ ಬದಲಾವಣೆ—ಅಧಿಕ ಓಡಾಟ ಗಳಿಗಾಗಿ—ಹೊಸ ಮಾರ್ಗಗಳಿಗೆ ವಿಭಾಗಾಧಿಕಾರಿಯವರು ಡಿಪೋಗಳಿಗೆ ಪುನರ್‌ಹಂಚಿಕೆ ಮಾಡುವರು.